ಬಡ ಮೀನುಗಾರರು ಡೀಸಲ್ ಬೆಲೆ ಹೆಚ್ಚಾದ ಈ ಕಾಲದಲ್ಲಿ ಅದರ ಖರ್ಚನ್ನು ಪೂರೈಸಿಕೊಳ್ಳುವುದು ಅಸಾಧ್ಯವಾಗಿದೆ. ಕರಾವಳಿಯ ಮೀನುಗಾರರು ಈಗಾಗಲೇ ಸದರಿ ತಮ್ಮ ಬೇಡಿಕೆಯನ್ನು ಮೀನುಗಾರಿಕೆ ಇಲಾಖೆಯ ಮುಂದಿಟ್ಟಿದ್ದು ಇದೆ. ಆದ್ದರಿಂದ ಇಲ್ಲಿಯವರೆಗೆ ಸರ್ಕಾರ ರಾಜ್ಯದ ಮೀನುಗಾರರಿಗೆ ಡೀಸೆಲ್ ಸಲುವಾಗಿ ಎಷ್ಟು ಸಹಾಯಧನ (ಸಬ್‌ಸಿಡಿ)ವನ್ನು ಪೂರೈಸಿದೆ. ಮತ್ತು ಆದಿಸೆಯಲ್ಲಿ ಸರ್ಕಾರದ ಧೋರಣೆ ಏನಿದೆ ಎನ್ನುವುದನ್ನು ತಿಳಿಸಬೇಕೆಂದು ಮಾನ್ಯ ಮೀನುಗಾರಿಕಾ ಸಚಿವರನ್ನು ವಿನಂತಿಸುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮಾನ್ಯ ಮೀನುಗಾರಿಕೆ ಮಂತ್ರಿಗಳಿಗೆ ತಿಳಿಸಿ ಸೂಕ್ತ ಉತ್ತರವನ್ನು ಕಳುಹಿಸುವುದಕ್ಕೆ ಏರ್ಪಾಡುಮಾಡುತ್ತೇನೆ

(೬) ಹೆಗ್ಗಡದೇವನಕೋಟೆ, ಹಂಪಾಪುರದ ಸ.ನಂ. ೭೮ರಲ್ಲಿರುವ ಜನರನ್ನು ಊರಿಂದ ಓಡಿಸಿರುವ ಬೆಗ್ಗೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಹಂಪಪುರ ಹೋಬಳಿ, ಸಿದ್ದರಾಮಯ್ಯನ ಹುಂಡಿಯಲ್ಲಿ ಸುಮಾರು ೫೦–೬೦ ವರ್ಷಗಳಿಂದಲೂ ಸುಮಾರು ೭೦–೮೦ ಕುಟುಂಬಗಳು ವಾಸವಾಗಿರುವುದು ಸರಿಯಷ್ಟೆ. ಬಡವರೂ, ಮುಗ್ಧರೂ ಆದ ಈ ಜನರು ಕೃಷಿ ಕಾರ್ಮಿಕರಾಗಿ. ಕೂಲಿಗಾರರಾಗಿ ನೆಮ್ಮದಿಯಿಂದ ಜೀವನ ಸಾಗಿಸುತ್ತಿರುವ ಸಂದರ್ಭದಲ್ಲಿ ಈ ಜನರಿಗೆ ಬರಸಿಡಿಲಿನಂತೆ ಒಂದು ವಿಚಿತ್ರ ಹಾಗೂ ಆಶ್ಚರ್ಯಕರ ಸುದ್ದಿ ಎಂದು ತಿಳಿದು ಈಗ ದಿಕ್ಕೆಟ್ಟಂತವರಾಗಿದ್ದಾರೆ ವಿಚಾರವೇನೆಂದರೆ ಸುಮಾರು ೪೦–೫೦ ವರ್ಷಗಳಿಂದ ವಾಸವಾಗಿರುವ ಜನರ ಈ ಗ್ರಾಮವು ಸರ್ಕಾರದ ಲೆಕ್ಕಪತ್ರಗಳಲ್ಲಿ ದಾಖಲಾಗಿಲ್ಲ. ಶ್ರೀ ಆರೇಗೌಡ ಎಂಬುವರ ಹೆಸರಿನಲ್ಲಿ ಹಿಡುವಳಿ ಭೂಮಿಯಾಗಿದ್ದು ಸರ್ವೆ ನಂ. ೭೮ ಶ್ರೀಯುತ ಆಲೇಗೌಡರು ನನ್ನ ಜಮೀನಿನಲ್ಲಿ ವಾಸ ಕಟ್ಟಿಕೊಂಡಿರುವ ನೀವು ಊರು ಬಿಟ್ಟು ಖಾಲಿ ಮಾಡಬೇಕು ಇಲ್ಲದಿದ್ದರೆ ನಿಮ್ಮ ಮನೆಗಳನ್ನು ಉರುಳಿಸಲಾಗುವುದೆಂದು ಹೆದರಿಸುತ್ತಿದ್ದಾರೆ. ಅಲ್ಲದೆ ಕೆಲವು ಮನೆಗಳನ್ನು ಉರುಳಿಸಲಾಗಿದೆ.

ಜಮೀನು ಮಾಲೀಕರು (ಗ್ರಾಮವಿರುವ ಜಮೀನು ಮಾಲೀಕರು) ಸರ್ವೆ ನಂ. ೭೮, ಮುಗ್ಧರಾದ ಈ ಜನರಿಗೆ ಹಿಂಸೆ ಕೊಟ್ಟು ಊರು ಖಾಲಿ ಮಾಡಿಸಲು ಪ್ರಯತ್ನ ನಡೆಸುತ್ತಿದ್ದಾರೆ. ಮುಗ್ಧರಾದ ಈ ಜನರ ಮೇಲೆ ಕಳ್ಳತನದ ಆಪಾದನೆಗಳನ್ನು ಹೊರಿಸಿ ಪೋಲೀಸ್ ಖಾತೆಯಲ್ಲಿ ಕೇಸು ದಾಖಲು ಮಾಡಿಸಿ ಕಿರುಕುಳ ಕೊಡುತ್ತಿದ್ದಾರೆ.

ಈಗ್ಗೆ ಕೆಲವು ತಿಂಗಳ ಹಿಂದೆ ಈ ತಾಲ್ಲೂಕಿಗೆ ಬೇಟಿ ನೀಡಿದ್ದ ಮಾನ್ಯ ಪಶುಸಂಗೋಪನಾ ಸಚಿವರಾದ ಶ್ರೀ ಸಿದ್ದರಾಮಯ್ಯನವರನ್ನು ಕಂಡು ಈ ಸಿದ್ದರಾಮಯ್ಯನವರ ಹುಂಡಿ ತಮ್ಮ ಹೆಸರಿನಲ್ಲಿದೆ. ಗೌರವ ಬರಲು ಈ ಗ್ರಾಮವನ್ನು ಉಳಿಸಿಕೊಡಿ ಎಂದ ಕೇಳಿಕೊಂಡಾಗ ಮಾನ್ಯ ಸಚಿವರಾದ ಶ್ರೀ ಸಿದ್ದರಾಮಯ್ಯನವರು ತೊಂದರೆ ಕೊಡುವ ಜಮೀನು ಮಾಲೀಕರ ಮೇಲೆ ಕ್ರಮ ಕೈಗೊಳ್ಳುವಂತೆ, ಅಧಿಕಾರಿಗಳಿಗೆ ಹೇಳಿ ಬಂದಿದ್ದಾರೆ. ಆದರೂ ಸಹ ಪ್ರತಿದಿನ ಜನರಿಗಾಗುತ್ತಿರುವ ತೊಂದರೆ ನಿಂತಿಲ್ಲ, ಹೆಂಗಸರು ಮಕ್ಕಳಾದಿಯಾಗಿ ಈ ಗ್ರಾಮವನ್ನು ಉಳಿಸಿಕೊಡಲು ಪ್ರಾರ್ಥಿಸುತ್ತಿದ್ದಾರೆ.

ಆದ್ದರಿಂದ ಸಂಬಂಧಿಸಿದ ಸಚಿವರು ಜಮೀನು ಮಾಲೀಕತ್ವವನ್ನು ರದ್ದುಪಡಿಸಬೇಕು. ಇಲ್ಲದಿದ್ದರೆ ಗ್ರಾಮಾಭಿವೃದ್ಧಿ ಸಚಿವರು ಭೂಮಿಯನ್ನು ಆಕ್ವೈರ್ ಮಾಡಲು ಈ ಕೂಡಲೇ ಸೂಚನೆ ನೀಡಬೇಕಾಗಿದೆ. ಆಂತೂ ಯಾವ ರೀತಿಯಿಂದಲಾದರೂ ಸರಿಯೇ ಈಗ ಸಿದ್ದರಾಮಯ್ಯನ ಹುಂಡಿ ಗ್ರಾಮವು ಗ್ರಾಮವಾಗಿ ಉಳಿಯಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ,—ಮಾನ್ಯ ಸಭಾವತಿಯವರೆ, ಮಾನ್ಯ ಸದಸ್ಯರು ಈಗತಾನೆ ಸರ್ಕಾರದ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಅದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಈಗ ವಿತ್ತೀಯ ಕಾರ್ಯಕ್ರಮ, ಬೇಡಿಕೆಗಳ ಮಂಡನೆ.